1	2	3	4
42	HT-24	KUWS and DB Mangalore Divn.,	82,97,934-30
43	HT-33	-do-	33,31,514-80
		O and M DIVISION, SHIMOGA	
44	BCHT-1	V.I S.L. Bhadravathi	32,15,,07,386-70
45	HT-2	M.P.M. Bhadravathi	3,45,93,318-90
46	HTGP-2	The Commissioner, CMC, Shimoga	74,45,421-70
47	MWHT-11	Chief Officer, TMC, Bhadravathi	61,01,776-10
		O and M DIVISION SIRSI	
48	HT-1	M/s Dandeli Ferro Alloys and Steel Pvt. Ltd.,	1,73,23,024-40
49	HT-2	Dandeli Paper Mills	1,41 65,752-40

ಡೀಸಲ್‌ದರ ಏರಿಕೆ ಹಾಗೂ ಬಸ್ ಮಾರ್ಗಗಳ ಕಡಿತ

೧೪೬. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ೧೯೯೦-೯೧ನೇ ಸಾಲಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅಂದಾಜು ಮಾಡಲಾಗಿರುವ ನಷ್ಟದ ಮೊತ್ತವೆಷ್ಟು ?

(ಆ) ಇತ್ತೀಚೆಗೆ ಡೀಸಲ್ ಬೆಲೆಗಳು ಜಾಸ್ತಿಯಾಗಿರುವುದರಿಂದ ಬಸ್ ದರಗಳನ್ನು ಈ ಸಾಲಿನಿಂದಲೇ ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

(ಇ) ಡೀಸೆಲ್ ಕಡಿತದಿಂದ ಸಾರಿಗೆ ಸಂಸ್ಥೆ ಕಡಿತ ಮಾಡಿರುವ ಬಸ್ ಮಾರ್ಗಗಳ ಸಂಖ್ಯೆ ಎಷ್ಟು ಹಾಗೂ ಇವುಗಳನ್ನು ಪುನರಾರಂಭ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು),—

(ಅ) ಸುಮಾರು ೩೫.೮೦ ಕೋಟಿ ರೂಪಾಯಿಗಳು.

(ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇದೆ.

(ಇ) ೧೨೨೭ ಮಾರ್ಗ ಸೂಚಿಗಳನ್ನು ಕಡಿತಗೊಳಿಸಲಾಗಿದೆ. ಇವುಗಳಲ್ಲಿ ೯೧೦ ಮಾರ್ಗಸೂಚಿಗಳನ್ನು ಹಂತ ಹಂತವಾಗಿ ಪ್ರಾರಂಭಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಇಂಧನ ಪೂರೈಕೆಯ ಸ್ಥಿತಿ ಉತ್ತಮಗೊಂಡ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎಲ್ಲ ಮಾರ್ಗಸೂಚಿಗಳನ್ನು ಪುನರಾರಂಭಿಸಲಿದೆ.

ಮಂತ್ರಿಗಳ ನಿವಾಸಗಳ ಬಗ್ಗೆ

೧೪೭. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಮಂತ್ರಿಗಳ ನಿವಾಸಗಳಿಗೆ ೧೯೮೯-೯೦, ೧೯೯೦-೯೧ನೇ ಸಾಲುಗಳ ದುರಸ್ತಿ ಹಾಗೂ ಪೀಠೋಪಕರಣಗಳಿಗಾಗಿ ಹಾಗೂ ದೂರವಾಣಿಗಳಿಗಾಗಿ ವಿಚಾರದ ಹಣವೆಷ್ಟು ?